# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1382(1430) |
| ಸದಸ್ಯರ ಹೆಸರು | : | ಡಾ: ಯತೀಂದ್ರ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ನೀರಾವರಿ ಯೋಜನೆಗಳಿಗೆ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿಯನ್ನು ಸರ್ಕಾರಿ ಮತ್ತು ಖಾಸಗಿ ಭೂಮಿವಾರು ಒದಗಿಸುವುದು) | ಜಲಸಂಪನ್ಮೂಲ (ಭಾರಿ ಮತ್ತು ಮಧ್ಯಮ ನೀರಾವರಿ) ಇಲಾಖೆಯಡಿ ಬರುವ 4 ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಲ್ಲಿ ನೀರಾವರಿ ಯೋಜನೆಗಳಿಗೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಂಡಿರುವ, ಸ್ವಾಧೀನ ಪಡಿಸಿಕೊಂಡ ಭೂಮಿಗೆ ಭೂ ಪರಿಹಾರ ನೀಡಿರುವ ಹಾಗೂ ಭೂ ಪರಿಹಾರ ಪ್ರಕರಣಗಳು ಬಾಕಿ ಇರುವ ವಿವರಗಳನ್ನು ನಿಗಮವಾರು ಅನುಬಂಧರಲ್ಲಿ ನೀಡಲಾಗಿದೆ. |
| ಆ) | ಈವರೆಗೆ ಸ್ವಾಧೀನ ಪಡಿಸಿಕೊಂಡ ಒಟ್ಟು ಭೂಮಿಯಲ್ಲಿ ಎಷ್ಟು ಎಕರೆ ಭೂಮಿಗೆ ಭೂ ಪರಿಹಾರ ನೀಡಲಾಗಿದೆ ಇನ್ನು ಎಷ್ಟು ಭೂಮಿಗೆ ಭೂ ಪರಿಹಾರ ನೀಡಿರುವುದಿಲ್ಲ; ಎಷ್ಟು ಭೂ ಪರಿಹಾರ ಪ್ರಕರಣಗಳು ಬಾಕಿ ಇವೆ; ಬಾಕಿ ಇರಲು ಕಾರಣವೇನು; (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು) | |
| ಇ) | ಭೂ ಪರಿಹಾರವನ್ನು ಯಾವಾಗ ನೀಡಲಾಗುವುದು? | ಭೂಸ್ವಾಧೀನಕ್ಕೆ ಒಳಪಟ್ಟಿರುವ ಖಾತೆದಾರರು<br>➢ ಸರಿಯಾದ ದಾಖಲೆಗಳನ್ನು ನೀಡಿದಾಗ<br>➢ ತಕರಾರುಗಳನ್ನು ಇತ್ಯರ್ಥಪಡಿಸಿಕೊಂಡು ದಾಖಲೆ ನೀಡಿದಾಗ<br>➢ ಸರ್ಕಾರಿ ಮಂಜೂರಿಯಾದ ಜಮೀನುಗಳನ್ನು ಪೋಡಿ ಮಾಡಿಸಿಕೊಂಡು ಪೋಡಿಆದ ಪಹಣಿ, ದಾಖಲೆ ನೀಡಿದಾಗ<br>➢ ಅವಾರ್ಡ್‌ದಾರರು ದಾಖಲೆ ಸಲ್ಲಿಸಿದ ನಂತರ ಹಾಗೂ ತಕರಾರು ಇತ್ಯರ್ಥವಾದ ನಂತರ, ಅವಾರ್ಡ್‌ದಾರರು ಸೂಕ್ತ ದಾಖಲೆಗಳನ್ನು ಒದಗಿಸಿದ ನಂತರ ಪರಿಹಾರವನ್ನು ಪಾವತಿಸಲಾಗುವುದು.<br>➢ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆ ನಡುವೆಉಂಟಾಗಿರುವ ದ್ವಿಹಕ್ಕು / ಡ್ಯೂಯಲ್‌ಕ್ಲೇಮ್ ಭೂಸ್ವಾಧೀನ ಪ್ರದೇಶದ ಕುರಿತು ಸಚಿವ ಸಂಪುಟದಲ್ಲಿಅನುಮೋದನೆ ನೀಡಿದ ನಂತರ ಬಾಕಿ ಇರುವ ಭೂಸ್ವಾಧೀನ ಪ್ರದೇಶಕ್ಕೆ ಪರಿಹಾರ ನೀಡಲಾಗುವುದು.<br>➢ ಭೂಸ್ವಾಧೀನಕಾಯ್ದೆ ಹಾಗೂ ನಿಯಮಾವಳಿ ಪ್ರಕಾರ ಐತೀರ್ಪು ರಚಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಉಳಿದ ಭೂಪರಿಹಾರದ ಪ್ರಕರಣಗಳಿಗೆ ನಿಯಾಮನುಸಾರ ಭೂಪರಿಹಾರ ವಿತರಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಜಸಂಇ 64 ಎಂಎಲ್‌ಎ 2025**

**(ಡಿ.ಕೆ.ಶಿವಕುಮಾರ್)**

**ಉಪ ಮುಖ್ಯ ಮಂತ್ರಿ**

**ಅನುಬಂಧ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಯತೀಂದ್ರ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1382(1430) ಕ್ಕೆ ಉತ್ತರ**

**ಕಾವೇರಿ ನೀರಾವರಿ ನಿಗಮ ನಿಯಮಿತ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಶೇಷ ಭೂಸ್ವಾಧೀನಾಧಿಕಾರಿ ವಾರು | ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣ | | | ಪರಿಹಾರ ಪಾವತಿಗೆ ಬಾಕಿ ಇರುವ ವಿಸ್ತೀರ್ಣ (ಎ – ಗು) | ರೈತರ ಸಂಖ್ಯೆ | ಪಾವತಿಸಲು ಬಾಕಿಯಿರುವ ಪರಿಹಾರ ಮೊತ್ತ | ಷರಾ |
|---|---|---|---|---|---|---|---|---|
| | | ಒಟ್ಟು | ಸರ್ಕಾರಿ (ಎ – ಗು) | ಖಾಸಗಿ (ಎ – ಗು) | | | | |
| 1 | ಮೈಸೂರು | 35,115 | 6320 | 28795 | ಇಲ್ಲ | ಇಲ್ಲ | ಇಲ್ಲ | ಇಬ್ಬಾಲ ಏ.ನೀ.ಯೋ. & ಇತರೆ ಹೊಸ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿದ್ದು, ಪ್ರಸ್ತುತ ಭೂಪರಿಹಾರ ಪಾವತಿಸಲು ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. |
| 2 | ಮಂಡ್ಯ | 6679.35 | – | 6679.35 | 552.19 | 4217 | 81.06 | – |
| 3 | ಹಾಸನ | 43,022 | 2868 | 40154 | 96.02 | 513 | 27.75 | – |
| 4 | ರಾಮನಗರ | 5,361 | 428 | 4933 | – | | – | ಶ್ರೀರಂಗ ಏ.ನೀ. ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿದ್ದು, ಪ್ರಸ್ತುತ ಭೂಪರಿಹಾರ ಪಾವತಿಸಲು ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. |
| 5 | ತುಮಕೂರು | 8,945–22 | 1789 | 7156–22 | 156.21 | 1549 | 27.19 | – |
| | **ಒಟ್ಟು** | **99,123–17** | **11,405** | **87718–17** | **805.02** | **6279** | **136.00** | |

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ:**

- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2ರಲ್ಲಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ರಾಯಚೂರ, ಯಾದಗಿರಿ, ಕಲಬುರಗಿ & ಕೊಪ್ಪಳ ಜಿಲ್ಲೆಗಳಡಿ 11 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಕಾಲುವೆ ನಿರ್ಮಾಣಕ್ಕಾಗಿ 77,328 ಎಕರೆ, ಮುಳುಗಡೆಯಾಗುವ 1,76,783 ಎಕರೆ, ಪುರ್ವಸತಿ ಕೇಂದ್ರುದ ನಿರ್ಮಾಣಕ್ಕಾಗಿ 15,092 ಎಕರೆ ಮತ್ತು ಅಚ್ಚುಕಟ್ಟು ಮತ್ತು ಮುಖ್ಯ ರಸ್ತೆ ನಿರ್ಮಾಣಕ್ಕಾಗಿ 4,595 ಎಕರೆಗಳಂತೆ ಒಟ್ಟಾರೆ 2,73,798 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಲಾಗಿದೆ.

- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿ ಉತ್ತರ ಕರ್ನಾಟಕದ ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ 09 ಯೋಜನೆಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ಮುಳುಗಡೆಗಾಗಿ 51,837 ಎಕರೆಗಳಂತೆ ಒಟ್ಟಾರೆ 1,33,867 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವುದಾಗಿದ್ದು, ಇದರಲ್ಲಿ 29,433 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

- ವಿಧಾನಸಭಾ ಕ್ಷೇತ್ರವಾರು ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-1 & 2 ರಲ್ಲಿನ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ರೂ. 4454.31 ಕೋಟಿ ಹಾಗೂ ಹಂತ-3ರ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಂಡ 29,433 ಎಕರೆ ಜಮೀನಿಗೆ ರೂ. 3709.15 ಕೋಟಿ ಮೊತ್ತದ ಪರಿಹಾರವನ್ನು ರೈತರಿಗೆ ವಿತರಿಸಲಾಗಿದೆ.
- ಇಲ್ಲಿಯವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-1 & 2ರಲ್ಲಿನ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಭೂಪರಿಹಾರವನ್ನು ವಿತರಿಸಲಾಗಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರಲ್ಲಿ ಭೂಸ್ವಾಧೀನಪಡಿಸಿಕೊಂಡ 29,433 ಎಕರೆ ಪೈಕಿ 27,030 ಎಕರೆ ಜಮೀನಿಗೆ ಭೂಪರಿಹಾರವನ್ನು ನಾಡಲಾಗಿದ್ದು, ಭೂಮಾಲೀಕರು ಮರಣ ಹೊಂದಿದ ಪ್ರಕರಣಗಳಲ್ಲಿ ವಾರಸುದಾರರ ದಾಖಲೆ ಸಲ್ಲಿಸಬೇಕಾದ ಮತ್ತು ರೈತರು ವೋಚರ್‌ಗಳನ್ನು ಸಲ್ಲಿಸದೇ ಇರುವ 2403 ಎಕರೆ ಜಮೀನಿನ ಪ್ರಕರಣಗಳಿಗೆ ಮಾತ್ರ ಭೂಪರಿಹಾರ ಬಾಕಿ ಇದ್ದು, ದಾಖಲೆ ಹಾಜರುಪಡಿಸಿದ ಮತ್ತು ವೋಚರ್‌ಗಳು ಸ್ವೀಕೃತಗೊಂಡ ನಂತರ ಭೂಪರಿಹಾರವನ್ನು ವಿತರಿಸಲಾಗುವುದು.

**<u>ಕರ್ನಾಟಕ ನೀರಾವರಿ ನಿಗಮ ನಿಯಮಿತ:</u>**

| ಕ್ರ ಸಂ. | ಮುಖ್ಯ ಇಂಜಿನೀಯರ್‌ವಾರು | ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣ | ಪರಿಹಾರ ಧನ ಪಾವತಿಸಿದ ವಿವರ (ಎ – ಗು) | ಪರಿಹಾರ ಪಾವತಿಗೆ ಬಾಕಿ ಇರುವ ವಿಸ್ತೀರ್ಣ (ಎ – ಗು) | ಪ್ರಕರಣ ಸಂಖ್ಯೆ | ಷರಾ |
|---|---|---|---|---|---|---|
| 1 | ಶಿವಮೊಗ್ಗ | 7156–00 | 6523 | 633–00 | 105 | |
| 2 | ಧಾರವಾಡ | 973–17 | 875–22 | 97–35 | 119 | |
| 3 | ಕಲಬುರಗಿ | 22325–16 | 21908–00 | 416–90 | – | |
| 4 | ಬೆಳಗಾವಿ | 53592–00 | 43473–00 | 10119–23 | 267 | |
| 5 | ಮುನಿರಾಬಾದ | 126013–10 | 126013–00 | – | – | ರೂ. 6,09,74,919=00 ಪರಿಹಾರ ಧನ ಬಿಡುಗಡೆಗೆ ಬಾಕಿ ಇರುತ್ತದೆ. |
| | ಒಟ್ಟು | **210060–03** | **198798–22** | **11266–27** | **491** | |

**<u>ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ:</u>**

<u>ಭದ್ರಾ ಮೇಲ್ದಂಡೆ ಯೋಜನೆ</u>

| ಕ್ರ ಸಂ | ತಾಲ್ಲೂಕು(ವಿಧಾನ ಸಭಾಕ್ಷೇತ್ರ) | ಖಾಸಗಿ ಜಮೀನು | | | |
|---|---|---|---|---|---|
| | | ಒಟ್ಟು ವಿಸ್ತೀರ್ಣ ಎಕರೆ–ಗುಂ.ಆಣೆ | ಭೂಪರಿಹಾರ ನೀಡಿರುವಒಟ್ಟು ವಿಸ್ತೀರ್ಣ (ಎ/ಗುಂ ಗಳಲ್ಲಿ) | ಭೂಪರಿಹಾರ ನೀಡಲು ಬಾಕಿ ಇರುವ ವಿಸ್ತೀರ್ಣ (ಎ/ಗುಂಗಳಲ್ಲಿ) | ಬಾಕಿ ಇರುವ ಭೂಪರಿಹಾರ ಪ್ರಕರಣಗಳು |
| **1** | ಹೊಸದುರ್ಗ | 1110–09.12+3267 ಚ.ಅಡಿ | 891–11.04+3267 ಚ.ಅಡಿ | 218–38.08 | 349 |
| **2** | ಹೊಳಲ್ಕೆರೆ | 125–33.05 | 107–29.05 | 18–04 | 37 |
| **3** | ಹಿರಿಯೂರು | 248–27.04 | 219–30.08 | 28–36.12 | 31 |
| **4** | ಚಿತ್ರದುರ್ಗ | 530–10.08 + 6534ಚ.ಅಡಿ | 483–34.12 + 6534ಚ.ಅಡಿ | 46–15.12 | 51 |
| **5** | ಚಳ್ಳಕೆರೆ | 29–26.00 | 5–07.00 | 24–19.00 | 69 |
| **6** | ಚಿಕ್ಕನಾಯಕನಹಳ್ಳಿ | 123–20.00 | 10–37.08 | 112–22.08 | 272 |
| **7** | ಶಿರಾ | 27–12.04 | 12–24.08 | 14–27.12 | 12 |

<u>ಬಾಕಿ ಇರಲು ಕಾರಣ:</u>

- ಖಾತೆದಾರರುಗಳು ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿ ಪರಿಹಾರ ಪಡೆದಿರುವುದಿಲ್ಲ.
- ಕೆಲವು ಸರ್ವೆ ನಂಬರ್‌ಗಳ ಖಾತೆದಾರರತಕರಾರುಇದ್ದು ಪರಿಹಾರ ಪಾವತಿ ಮಾಡಲು ಕಾಲವಕಾಶ ಕೋರಿರುತ್ತಾರೆ.
- ಕೆಲವು ಸರ್ವೆ ನಂಬರ್‌ಗಳು ಸರ್ಕಾರಿ ಮಂಜೂರಾತಿಜಮೀನಾಗಿದ್ದು, ಪೋಡಿ ದುರಸ್ತಿಯಾಗಿರುವುದಿಲ್ಲ.

ಎತ್ತಿನಹೊಳೆ ಯೋಜನೆ

| ಕ್ರ ಸಂ | ತಾಲ್ಲೂಕು (ವಿಧಾನ ಸಭಾಕ್ಷೇತ್ರ) | ಖಾಸಗಿ ಜಮೀನು | | | |
|---|---|---|---|---|---|
| | | ಒಟ್ಟು ವಿಸ್ತೀರ್ಣ ಎಕರೆ-ಗುಂ.ಆಣೆ | ಭೂಪರಿಹಾರ ನೀಡಿರುವಒಟ್ಟು ವಿಸ್ತೀರ್ಣ (ಎ/ಗುಂ ಗಳಲ್ಲಿ) | ಭೂಪರಿಹಾರ ನೀಡಲು ಬಾಕಿ ಇರುವ ವಿಸ್ತೀರ್ಣ (ಎ/ಗುಂಗಳಲ್ಲಿ) | ಬಾಕಿ ಇರುವ ಭೂಪರಿಹಾರ ಪ್ರಕರಣಗಳು |
| 1 | ಸಕಲೇಶಪುರ (ಸಕಲೇಶಪುರ ನೇರಖರೀದಿ ಸೇರಿ) ಆಲೂರು | 907–30.00 | 871–06.08 | 36–23.08 | 14 |
| 2 | ಬೇಲೂರು | 694–08.12 | 656–09.04 | 37–39.08 | 27 |
| 3 | ಅರಸೀಕೆರೆ | 906–27.00 | 771–05.00 | 135–22.00 | 61 |
| 4 | ಸಿ.ಎನ್.ಹಳ್ಳಿ | 184–36.00 | 122–10.00 | 62–26.00 | 74 |
| 5 | ತಿಪಟೂರು | 831–25.00 | 654–23.00 | 177–02.00 | 245 |
| 6 | ಗುಬ್ಬಿ | 646–30.00 | 630–01.00 | 16–29.00 | 43 |
| 7 | ತುಮಕೂರು | 526–35.00 | 512–06.00 | 14–29.00 | 107 |
| 8 | ಕೊರಟಗೆರೆ | 433–19.00 | 280–03.00 | 153–16.00 | 237 |
| 9 | ಮಧುಗಿರಿ | 5–30.00 | 4–25.00 | 1–05.00 | 09 |
| 10 | ತುರುವೇಕರೆ | 50–11.12 | 50–11.12 | – | – |
| 11 | ನೆಲಮಂಗಲ | 21–28.04 | 11–03.12 | 10–24.08 | 116 |
| 12 | ದೊಡ್ಡಬಳ್ಳಾಪುರ | 4–05.12 | 00–31.00 | 03–14.12 | 30 |

ಬಾಕಿ ಇರಲುಕಾರಣ:

- ಬೇಲೂರು ಮತ್ತು ಅರಸೀಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಂದಾಯ ಇಲಾಖೆ ಹಾಗೂ ಅರಣ್ಯಇಲಾಖೆಯ ನಡುವಲುಂಟಾಗಿರುವ ದ್ವಿಹಕ್ಕು (ಡ್ಯಯಲ್‌ಕ್ಲೇಮ್) ಭೂಸ್ವಾಧೀನ ಪ್ರದೇಶವಾಗಿದ್ದು, ಸಚಿವ ಸಂಪುಟದಲ್ಲಿಅನುಮೋದನೆ ಪಡೆದ ನಂತರ ಬಾಕಿ ಇರುವ ಭೂಸ್ವಾಧೀನ ಪ್ರದೇಶಕ್ಕೆ ಪರಿಹಾರ ಪಾವತಿಸಲು ನಿಯಮಾನುಸಾರಕ್ರಮ ಕೈಗೊಳ್ಳಲಾಗುವುದು.
- ಖಾತೆದಾರರುಗಳು ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿ ಪರಿಹಾರ ಪಡೆದಿರುವುದಿಲ್ಲ.
- ಕೆಲವು ಸರ್ವೆ ನಂಬರ್‌ಗಳ ಖಾತೆದಾರರತಕರಾರುಇದ್ದು ಪರಿಹಾರ ಪಾವತಿ ಮಾಡಲು ಕಾಲವಕಾಶ ಕೋರಿರುತ್ತಾರೆ.
- ಕೆಲವು ಸರ್ವೆ ನಂಬರ್‌ಗಳು ಸರ್ಕಾರಿ ಮಂಜೂರಾತಿಜಮೀನಾಗಿದ್ದು, ಪೋಡಿ ದುರಸ್ತಿಯಾಗಿರುವುದಿಲ್ಲ.